



ಅನಂತರ ರೂಬಿ ಅಥವಾ ಎಮರಾಲ್ಡ್ ಹರಳಿನ ಆಭರಣ ಖರೀದಿಸಬಹುದು. ಸಾಧಾರಣ ಸೀರೆಯ ಅಂಚುಗಳು, ಕೆಂಪು, ಮೆರೂನ್ ಬಣ್ಣದಲ್ಲೇ ಇರುತ್ತವೆ ಅಥವಾ ಪಿಂಕ್, ಗಾಢ ಕಂದು ಬಣ್ಣ ಇಂತಹ ಬಟ್ಟೆಗಳೇ ಇರುತ್ತವೆ. ಅಂತಹ ಬಟ್ಟೆಗಳಿಗೆ ಈ ಆಭರಣ ಸರಿಯಾಗಿ ಹೊಂದಿಕೊಳ್ಳುತ್ತದೆ. ಹಾಗಾಗಿ ಮೊದಲು ಚಿನ್ನದ , ಮುತ್ತಿನ ಅನಂತರ ಬಿಳಿ ಹರಳಿನ, ನಂತರ ರೂಬಿ, ಎಮರಾಲ್ಡ್ ಅನಂತರ ನಿಮ್ಮ ಇಷ್ಟಾನುಸಾರ ಖರೀದಿಸಬಹುದು.

## ಸಮಾರಂಭಗಳಿಗೆ

ಇಂದು ಆಭರಣ, ಬಟ್ಟೆ, ಮೇಕಪ್ ಮೂರಕ್ಕೂ ಪ್ರಾಧಾನ್ಯತೆ ಇದೆ. ಆಭರಣವಂತೂ ಎಲ್ಲರ ಕಣ್ಣು ಕೋರೈಸುವಂತೆ ಇರಬೇಕು ಹಾಗಾದರೆ ಹೇಗಿರಬೇಕು. ಎರಡು ಎಳೆ ಉದ್ದಗಿನ ಸರ ಹಾಕಿದರೆ ಅದಕ್ಕೆ ಪೆಂಡೆಂಟ್ ಬೇಡ. ಕುತ್ತಿಗೆಯ ನೆಕ್ಲೇಸ್ ಸ್ವಲ್ಪ ತೆಳ್ಳಗೆ ಇರಲಿ. ಒಂದೆಳೆ ಸರ ಧರಿಸಿದರೆ ದಪ್ಪಗಿನ ನೆಕ್ಲೇಸ್ ಇರಲಿ. ದಪ್ಪಗಿನ ಚೋಕರ್ ಧರಿಸಿದರೆ ಅದೊಂದೇ ಸಾಕು. ಉದ್ದ ಸರ ಇದರೊಂದಿಗೆ ಕಾಣುವುದೇ ಇಲ್ಲ. ಕಿವಿಗೆ ದೊಡ್ಡ ಬೆಂಡೋಲೆ ಇರಲಿ. ಜುಮುಕಿ ಆದರೆ ಸ್ವಲ್ಪ ಅಗಲವಾಗಿ ದೊಡ್ಡದಾಗಿರಲಿ. ಜುಮುಕಿಯ ಕೆಳಗೆ ಮುತ್ತಿನ ಜಾಲರಿಗಳು ಇರಲಿ. ಕೈಗೆ ಒಂದು ದೊಡ್ಡ ಉಂಗುರ ರಾಜ ಕಳೆ ಇರುತ್ತದೆ. ಕೈಗೆ ಖಡಗ ಇರಲಿ. ಇನ್ನೊಂದು ಕೈಗೆ ವಾಚ್ ಕಟ್ಟಬಹುದು. ಚಿನ್ನದ ಬಣ್ಣದ್ದೇ ಆದರೆ ಒಳ್ಳೆದು.

ಈ ಆಭರಣಗಳು ಲೆಹೆಂಗ, ಸೀರೆ ಎರಡಕ್ಕೂ ಹೊಂದಿಕೊಳ್ಳುತ್ತದೆ. ಸರಳವಾಗಿರಬೇಕೆಂದಾದರೆ ಕತ್ತಲ್ಲಿ ಕಿವಿಯಲ್ಲಿ ಒಂದೇ ವಿನ್ಯಾಸದ ನೆಕ್ಲೇಸ್, ಓಲೆ ಇರಲಿ ಚಿನ್ನದ ಬಳೆಯೊಂದಿಗೆ ಬಟ್ಟೆಯ ಬಣ್ಣದ ಬೇರೆ ಬಳೆ ಬೇಕಾದಲ್ಲಿ ಬಳಸಬಹುದು. ಮುತ್ತೈದೆ ಆದರೆ ಕಾಲುಂಗುರ , ಕಾಲ್ಗೆಜ್ಜೆ ಜೊತೆಗಿರಲಿ. ಈಗಿನ ಹೆಣ್ಮಕ್ಕಳು ಸ್ವಲ್ಪ ವಿಭಿನ್ನವಾಗಿ ಆ್ಯಂಕಲ್ ಚೈನ್ ಧರಿಸುತ್ತಾರೆ. ಏನೋ ಸಂತಸ ಅದರಲ್ಲಿ ಕೈ ಉಂಗುರ ಇಷ್ಟ ಪಡದವರು ಇಲ್ಲ. ಮ್ಯಾಚಿಂಗ್ ಅಲ್ಲದಿದ್ದರೂ ಹೊಳೆಯುವ ಹರಳು, ಮಣಿ, ಹೊಂದಿದ್ದು ಧರಿಸಿದರೆ ಆಭರಣ ಮಿಂಚುವುದರಲ್ಲಿ ಸಂಶಯವಿಲ್ಲ, ಆದಷ್ಟು ದಿನವೂ ಬಳಸುವುದನ್ನು ಬಳಸದೆ ಅಪರೂಪಕ್ಕೆ ಧರಿಸುವುದನ್ನು ಸಮಾರಂಭಗಳಿಗೆ ಬಳಸುವುದು ಉತ್ತಮ.